ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಶುಕ್ರವಾರ, ೩೦ನೇ ಆಗಸ್ಟ್ ೧೯೯೧, ಭಾದ್ರಪದ ೮, ಶಕ ೧೯೧೩

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 9.15 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ಎಸ್.ಎಂ. ಕೃಷ್ಣ)** ಅವರು ಪೀಠವನ್ನು ಅಲಂಕರಿಸಿದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ. ವೀರಪ್ಪ ಮೊಯಿಲಿ : ಚುಕ್ಕೆ ಪ್ರಶ್ನೆ ಸಂಖ್ಯೆ : 354(2018) ಇದರ ಸಂಬಂಧಪಟ್ಟ ಮಂತ್ರಿಗಳು ಪ್ರಶ್ನೆಗೆ ಸಮಯಾವಕಾಶವನ್ನು ಕೇಳಿದ್ದಾರೆ.

ಅಧ್ಯಕ್ಷರು : ಮಂತ್ರಿಗಳು ಜವಳಿ ಕಾನ್‌ಫರೆನ್ಸ್‌ಗೆ ಹೋಗಿದ್ದಾರೆ. ಟೆಕ್ಸ್‌ಟೈಲ್ಸ್ ಮಿನಿಸ್ಟರುಗಳ ಮೀಟಿಂಗ್‌ನ್ನು ಗೌರ್ನಮೆಂಟ್ ಆಫ್ ಇಂಡಿಯಾದವರು ಕರೆದಿದ್ದಾರೆ. ಆ ಮೀಟಿಂಗ್ ಅಟೆಂಡ್ ಮಾಡುವುದಕ್ಕೆ ಡೆಲ್ಲಿಗೆ ಹೋಗಿದ್ದಾರೆ. ಈ ಪ್ರಶ್ನೆಯನ್ನು ನೆಕ್ಸ್‌ವೀಕ್ ತೆಗೆದುಕೊಳ್ಳೋಣ.

ಶ್ರೀ ಗೋಪಿನಾಥ ಆರ್. ಸಾಂದ್ರ : ಇದು ಅತಿ ಮಹತ್ವದ ಪ್ರಶ್ನೆ.

ಅಧ್ಯಕ್ಷರು : ಅದಕ್ಕೆ ಅವರು ಡೆಲ್ಲಿಗೆ ಹೋಗಿರುವುದು; ಇದಕ್ಕೆ ಸಂಬಂಧಪಟ್ಟ ಹಾಗೆಯೇ ಡೆಲ್ಲಿಗೆ ಹೋಗಿದ್ದಾರೆ.

ಮೂಡಿಗೆರೆ ಎಂ.ಜಿ.ಎಂ. ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಬೇಡಿಕೆ

2033ಎ - ಶ್ರೀಮತಿ ಮೋಟಮ್ಮ (ಮೂಡಿಗೆರೆ) ; ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆ ಎಂ.ಜಿ.ಎಂ. ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಬೇಡಿಕೆ ಸರ್ಕಾರದ ಮುಂದಿದೆಯೇ?

ಆ) ಹೊರ ರೋಗಿಗಳ ಸಂಖ್ಯೆ ಪ್ರತಿದಿನ 100ಕ್ಕೂ ಹೆಚ್ಚಾಗಿರುವುದರಿಂದ 100 ಹಾಸಿಗೆ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಲು ಇರುವ ತೊಂದರೆಗಳೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇದೆ.

ಆ) ತೊಂದರೆ ಬಗ್ಗೆ ವರದಿ ತರಿಸಲಾಗುತ್ತಿದೆ.

ಶ್ರೀಮತಿ ಮೋಟಮ್ಮ : ಸನ್ಮಾನ್ಯ ಅಧ್ಯಕ್ಷರೆ, ನಾನು ಮೂಡಿಗೆರೆ ಎಂ.ಜಿ.ಎಂ.ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವ ಬೇಡಿಕೆ ಸರ್ಕಾರದ ಮುಂದೆ ಇದೆಯೇ ಎಂದು ಕೇಳಿದ್ದಕ್ಕೆ 'ಇದೆ' ಎಂದು ಹೇಳಿದ್ದಾರೆ. ನಂತರ ಹೊರರೋಗಿಗಳ ಸಂಖ್ಯೆ ಪ್ರತಿ ದಿನ ನೂರಕ್ಕೂ ಹೆಚ್ಚಾಗುತ್ತಿರುವುದರಿಂದ ನೂರು ಹಾಸಿಗೆಯ ಆಸ್ಪತ್ರೆಯಾಗಿ ಮೇಲ್ದರ್ಜೆಗೆ ಏರಿಸಲು

ಇರುವ ತೊಂದರೆಗಳೇನು ಎಂದು ಕೇಳಿದ್ದೇನೆ. ಅದಕ್ಕೆ ತೊಂದರೆಗಳ ಬಗ್ಗೆ ವರದಿ ತರಿಸಲಾಗುತ್ತಿದೆ ಎಂದು ಹೇಳಿದ್ದಾರೆ. ತೊಂದರೆಗಳ ವರದಿ ತಂದು ಅವರು ಏನು ಮಾಡುತ್ತಾರೆಂದು ನನಗೆ ಗೊತ್ತಾಗುತ್ತಿಲ್ಲ.

ಅಧ್ಯಕ್ಷರು : ಆಮೇಲೆ ಅದಕ್ಕೆ ಔಷಧಿ ಕೊಡುತ್ತಾರೆ.

ಶ್ರೀಮತಿ ಮೋಟಮ್ಮ : ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡುವುದೇನೆಂದರೆ, ನಮ್ಮ ಮೂಡಿಗೆರೆಯಲ್ಲಿರುವ ಈ ಆಸ್ಪತ್ರೆ ಸುಂದರವಾಗಿದೆ, ಅದಕ್ಕೆ ಒಳ್ಳೆಯ ಭವ್ಯವಾದ ಕಟ್ಟಡ ಇದೆ. ತಾಲ್ಲೂಕು ಹೆಡ್‌ಕ್ವಾರ್ಟರ್‌ನಲ್ಲಿ ಅಷು ಬ್ಯೂಟಿಫುಲ್ ಆಸ್ಪತ್ರೆ ಇದೆಯೆಂದು ಹೇಳಿದರೆ,

ಅಧ್ಯಕ್ಷರು : ನಿಮ್ಮ ಆಸ್ಪತ್ರೆ ಬ್ಯೂಟಿಫುಲ್ ಆಗಿದೆಯೇ?

ಶ್ರೀಮತಿ ಮೋಟಮ್ಮ ; ಹೌದು, ಬೇರೆ ಡಿಸ್ಟ್ರಿಕ್ ಆಸ್ಪತ್ರೆಗಳಿಗೆ ಕಂಪೇರ್ ಮಾಡಿದರೆ ಇದು ತುಂಬಾ ತುಂಬಾ ಸುಂದರವಾಗಿದೆ. ಹಿಂದೆ ಆರೋಗ್ಯಮಂತ್ರಿಗಳಾಗಿದ್ದ ಸಮದ್‌ರವರು ಅಲ್ಲಿ ಹೋಗಿದ್ದಾರೆ, ಶ್ರೀಮತಿ ಮನೋರಮಾ ಅವರು ಹೋಗಿದ್ದಾರೆ. ಬಹುಶಃ ಸಿಂಧ್ಯಾರವರು ಆರೋಗ್ಯ ಮಂತ್ರಿಗಳಾಗಿದ್ದಾಗಲೂ ಹೋಗಿದ್ದಾರೆಂದು ನನ್ನ ಅನಿಸಿಕೆ. ಎಲ್ಲರೂ ನೋಡಿದ್ದಾರೆ. ಅದು ಸಾಕಷ್ಟು ದೊಡ್ಡದಿದೆ. ಮತ್ತೆ ಎಲ್ಲಾ ಸೌಲಭ್ಯಗಳು ಇವೆ. ಆಂಬುಲೆನ್ಸ್ ಇದೆ; ಆದ್ದರಿಂದ ತೊಂದರೆಗಳ ಬಗ್ಗೆ ವರದಿಯನ್ನು ತರಿಸಿಕೊಳ್ಳುವುದರ ಬದಲಾಗಿ, ಅಲ್ಲಿ ಅಗತ್ಯವಾಗಿ ಆಗಬೇಕಾಗಿರುವ ನೂರು ಬೆಡ್ ಹಾಸ್ಪಿಟಲ್‌ಗೆ ಅಪ್‌ಗ್ರೇಡ್ ಮಾಡಲಿಕ್ಕೆ ಬೇಕಾದ ವರದಿಯನ್ನು ತರಿಸಿಕೊಂಡು ಆದಷ್ಟು ಬೇಗ ಅಂದರೆ ಈ ವರ್ಷವೇ ಅದನ್ನು ಮೇಲ್ದರ್ಜೆಗೆ ಏರಿಸುತ್ತಾರೆಯೇ ಎಂದು ನಾನು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಮಾನ್ಯ ಅಧ್ಯಕ್ಷರೆ, ಮೂಡಿಗೆರೆ ಸಾರ್ವತ್ರಿಕ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸತಕ್ಕಂಥಾದ್ದಕ್ಕೆ ಈಗಾಗಲೇ ಸರ್ಕಾರದ ಮುಂದೆ ತೀವ್ರ ಪರಿಶೀಲನೆಯಲ್ಲಿ ಇಟ್ಟುಕೊಂಡಿದ್ದೇವೆ. ಇದಕ್ಕೆ 60 ಲಕ್ಷ ರೂಪಾಯಿ ಹಣ ಬೇಕಾಗುತ್ತದೆ. ಇದರಲ್ಲಿ 48 ಲಕ್ಷ ರೂಪಾಯಿ ಹೆಚ್ಚುವರಿ ಕಟ್ಟಡಕ್ಕೂ, 12ಲಕ್ಷ ರೂಪಾಯಿ ಸಿಬ್ಬಂದಿ ವೆಚ್ಚಕ್ಕೂ ಬೇಕಾಗುತ್ತದೆ ಎನ್ನತಕ್ಕಂಥ ಕರಡು ಯೋಜನೆ ತಯಾರು ಮಾಡಿದ್ದಾರೆ. ಇದಕ್ಕೆ ಹಣ ಒದಗಿಸತಕ್ಕವರು ಜಿಲ್ಲಾಪರಿಷತ್ತಿನವರು. ಈ ವರ್ಷ ಆಯವ್ಯಯದಲ್ಲಿ ಅವರು ಹಣವನ್ನು ಇಯರ್ ಮಾರ್ಕ್ ಮಾಡಲಿಲ್ಲ. ಆ ಕಾರಣದಿಂದ ಗೌರ್ನಮೆಂಟ್‌ನಿಂದ ಕ್ಲಿಯರೆನ್ಸ್ ಹೋಗಲಿಲ್ಲ. ಮತ್ತು ಈ ವರ್ಷ ಮತ್ತೊಂದು ಪತ್ರವನ್ನು ಜಿಲ್ಲಾಪರಿಷತ್ತಿಗೆ ಬರೆದಿದ್ದೇವೆ. ನಿಮ್ಮ ಒಟ್ಟಾರೆ ಆಯವ್ಯಯದಲ್ಲಿ ಸ್ವಲ್ಪ ಹಣವನ್ನು ಇದಕ್ಕೆ ಒದಗಿಸಿ; ನಂತರ ಇದಕ್ಕೆ ನಾವು ಮಂಜೂರಾತಿಯನ್ನು ಕೊಡುತ್ತೇವೆಂದು ಹೇಳಿದ್ದೇವೆ. ಅಲ್ಲಿಂದ ವರದಿ ಬಂದ ನಂತರ ಇದನ್ನು ಮೇಲ್ದರ್ಜೆಗೆ ಏರಿಸತಕ್ಕಂಥ ಕೆಲಸವನ್ನು ತೀವ್ರವಾಗಿ ಸರ್ಕಾರ ಮಾಡುತ್ತದೆನ್ನುವ ಭರವಸೆಯನ್ನು ಅವರಿಗೆ ಕೊಡಬಯಸುತ್ತೇನೆ.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಒಂದು ಆಸ್ಪತ್ರೆ ಟ್ರಸ್ಟ್ ಇದೆ. ಈ ಆಸ್ಪತ್ರೆಯ ಕಟ್ಟಡವನ್ನು ಅಷ್ಟು ಭವ್ಯವಾಗಿ ಕಟಿರುವುದು ಆ ಟ್ರಸ್ಟ್‌ನವರು. ಜೊತೆಗೆ ಸ್ಪೆಷಲ್ ವಾರ್ಡ್‌ಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಸರ್ಕಾರವು ಈ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವ ಸಂದರ್ಭದಲ್ಲಿ ಆ ಟ್ರಸ್ಟ್‌ನವರ ಜೊತೆ ಮಾತನಾಡಿ, ನೀವು ಎಷ್ಟು ವಂತಿಗೆ ಕೊಡುತ್ತೀರಿ ಅಥವಾ ಎಷ್ಟು ರೂಮುಗಳನ್ನು ಕಟ್ಟಿಸಿಕೊಡುತ್ತೀರೆಂದು ಕೇಳಬೇಕು. ಇದರ ಜೊತೆಗೆ ಜಿಲ್ಲಾಪರಿಷತ್ತಿನವರು ವಂತಿಗೆಯನ್ನು ಕೊಡಲಿಕ್ಕೆ ತಯಾರಿದ್ದಾರೆ. ಜೊತೆಗೆ ಸರ್ಕಾರವೂ ಸಾಕಷ್ಟು ಹಣವನ್ನು ಕೊಟ್ಟಿದ್ದೇ ಆದರೆ ಈ ವರ್ಷವೇ ಅದನ್ನು ಅಪ್‌ಗ್ರೇಡ್ ಮಾಡಲಿಕ್ಕೆ ಸಾಧ್ಯತೆ ಇದೆ. ದಯಮಾಡಿ ಈ

ಆಸ್ಪತ್ರೆಯನ್ನು ನೂರು ಬೆಡ್ ಆಸ್ಪತ್ರೆಯಾಗಿ ಈ ವರ್ಷವೇ ಮೇಲ್ದರ್ಜೆಗೆ ಏರಿಸಿಕೊಡಬೇಕು. ಏಕೆಂದರೆ, ನಮ್ಮದು ಮಲೆನಾಡು ಪ್ರದೇಶ. ಗುಡ್ಡಗಾಡು ಪ್ರದೇಶಗಳಿಂದ ಜನರು ಔಷಧಿಗೋಸ್ಕರ ಅಥವಾ ಆರೋಗ್ಯ ತಪಾಸಣೆಗೆ ಬರಬೇಕಾಗುತ್ತದೆ. ಅವರು ಚಿಕ್ಕಮಗಳೂರಿಗೋ, ಹಾಸನಕ್ಕೋ. ಮಂಗಳೂರಿಗೋ ಹೋಗಬೇಕಾದರೆ ಬಡವರಿಗೆ ತುಂಬಾ ಕಷ್ಟವಾಗುತ್ತದೆ. ನಮ್ಮದು ಟ್ರೈಬಲ್ ಏರಿಯಾ. ಹರಿಜನ ಗಿರಿಜನರು ಸಾಕಷ್ಟು ಇದ್ದಾರೆ. ಆದ್ದರಿಂದ, ಈ ವರ್ಷವೇ ಮನಸ್ಸು ಮಾಡಿ ಈ ಆಸ್ಪತ್ರೆಯನ್ನು ಅಪ್‌ಗ್ರೇಡ್ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ ; ಮಾನ್ಯ ಅಧ್ಯಕ್ಷರೇ, ಈಗಾಗಲೇ ಮೂಡಿಗೆರೆ ಆಸ್ಪತ್ರೆಯಲ್ಲಿ 64 ಹಾಸಿಗೆಗಳ ವ್ಯವಸ್ಥೆ ಇದೆ. ಇದನ್ನು 100 ಹಾಸಿಗೆಗಳ ಮಟ್ಟಕ್ಕೆ ಏರಿಸತಕ್ಕದ್ದಕ್ಕೆ ಈ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಹಾಗೇನಾದರೂ ದತ್ತಿಯವರು ಇದಕ್ಕೆ ಮುಂದೆ ಬಂದು ಬಿಲ್ಡಿಂಗ್‌ಗಳನ್ನು ಕಟ್ಟಿಕೊಡುವುದೇ ಆಗಲೀ ಅಥವಾ ಇನ್ಯಾವುದೆ ಉಪಕರಣಗಳಿಗೆ ಸಹಾಯ ಕೊಡುವುದಾದರೆ ಸಂತೋಷದಿಂದ ಸರ್ಕಾರ ಅದನ್ನು ಸ್ವೀಕರಿಸುತ್ತದೆ. ಇವರ ಜೊತೆ ವ್ಯವಹಾರ ಕೂಡ ನಾವು ಮಾಡುತ್ತೇವೆ. ಏಕೆಂದರೆ, ಇವರ ವ್ಯವಹಾರ ನಮಗೆ ಗೊತ್ತಿರಲಿಲ್ಲ. ಈಗ ಮಾನ್ಯ ಸದಸ್ಯರು ತಿಳಿಸಿದ್ದಾರೆ. ಅದನ್ನು ಕೂಡ ನಾವು ಮಾಡುತ್ತೇವೆ. ಮತ್ತೆ ಜಿಲ್ಲಾ ಪರಿಷತ್‌ನವರು ಹಣವನ್ನು ಬಿಡುಗಡೆ ಮಾಡತಕ್ಕಥಾದ್ದಕ್ಕೆ ಮಾನ್ಯ ಶಾಸಕರು ಪ್ರಯತ್ನ ಮಾಡಲಿ ಎಂದು ಅವರನ್ನು ತಮ್ಮ ಮೂಲಕ ಒತ್ತಾಯಪಡಿಸುತ್ತೇನೆ. ನಂತರ ಅದಕ್ಕೆ ಮಂಜುರಾತಿಯನ್ನು ಕೊಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ ; ಮೂಡಿಗೆರೆ ಆಸ್ಪತ್ರೆ ಪೂರ್ತಿಯಾಗಿ ಸಾರ್ವಜನಿಕ ವಂತಿಗೆಯಿಂದಲೇ ಆಗಿರುವುದು. ಸರ್ಕಾರದವರನ್ನು ನಂಬಿಕೊಂಡು ವರದಿ ತರಿಸಿಕೊಳ್ಳದೇ ಇದ್ದಿದ್ದರೆ ಇನ್ನೂ ಹತ್ತಾರು ವರ್ಷಗಳಾದರೂ ಆಸ್ಪತ್ರೆ ಬರುತ್ತಾ ಇರಲಿಲ್ಲ. ನಾವು ಹಣ ಕೊಟ್ಟಿದ್ದೇವೆ. ಬರೀ ಆಸ್ಪತ್ರೆಗೆ ಅಷ್ಟೇ ಅಲ್ಲ, ವಿಶೇಷವಾಗಿ ಅಲ್ಲಿರತಕ್ಕ ಎಕ್ವಿಪ್‌ಮೆಂಟ್‌ಗೂ ಕೊಟ್ಟಿದ್ದಾರೆ. ಜೊತೆಗೆ ಸ್ಪೆಷಲ್ ವಾರ್ಡ್‌ಗಳನ್ನು ಕಟ್ಟಿಕೊಟ್ಟಿದ್ದಾರೆ. ಸರ್ಕಾರದ ಕೆಲಸ ಏನು ಅಂದರೆ ಬರೀ ಒಂದು ಮಂಜೂರಾತಿಯನ್ನು ಬರೆಯುವುದಷ್ಟೇ. ಈಗ ಅದನ್ನು ಬರೆಯುವುದಕ್ಕೂ ಇವರಿಗೆ ವರದಿ ಬೇಕು, ತರಿಸಿಕೊಳ್ಳುತ್ತೇವೆ, ಸಮಯ ಬೇಕು ಎನ್ನುತ್ತಾರೆ. 40 ಲಕ್ಷ ರೂಪಾಯಿಗಳು ಕಟ್ಟಡಕ್ಕೆ ಬೇಕಾಗಿರತಕ್ಕ ಹಣ ಏನು ಇದೆಯಲ್ಲ. ಇವರು ' ಬೇರೆ ಬೇರೆ ಆಸ್ಪತ್ರೆಗಳಿಗೆ ಎಷ್ಟು ಖರ್ಚು ಮಾಡಿದ್ದಾರೆ ಎಂದು ವರದಿ ತರಿಸಿಕೊಳ್ಳಲಿ. ಈ ಆಸ್ಪತ್ರೆಗೆ ನಿಮ್ಮ ಸರ್ಕಾರದ ಹಣ ಏನೂ ಇಲ್ಲ. ಆದ್ದರಿಂದ ಈಗ ಮಾಡಿರತಕ್ಕ ಖರ್ಚಿನ ಜೊತೆಗೆ ಇನ್ನೂ ಬೇಕು ಎಂದರೆ, ಸಾರ್ವಜನಿಕ ವಂತಿಕೆಯಿಂದ ಕೊಡಿಸುವುದಕ್ಕೆ ಅವಕಾಶವಿದೆ. ಮೊದಲು ನೀವು 100 ಬೆಡ್ ಆಸ್ಪತ್ರೆಯನ್ನು ಮಾಡುವುದಕ್ಕೆ ತಾತ್ವಿಕವಾಗಿ ಒಪ್ಪಿಕೊಂಡಿದ್ದೇವೆಂದು ಹೇಳಿ. ಉಳಿದುದನ್ನು ನಾವು ನಿಧಾನವಾಗಿ ಮಾಡಿಸುತ್ತೇವೆ.

ಶ್ರೀ ಜಿ. ಪುಟಸ್ವಾಮಿಗೌಡ ; ಇದಕ್ಕೆ ಜಿಲ್ಲಾ ಪರಿಷತ್‌ರವರು ಹಣವನ್ನು ಇಯರ್ ಮಾರ್ಕ್ ಮಾಡಿದ ನಂತರ ಸರ್ಕಾರದ ಹಣಕಾಸಿನ ಇಲಾಖೆಯವರು ಮಂಜೂರಾತಿಯನ್ನು ಕೊಡತಕ್ಕದ್ದು. ಈ ಸಾರಿಯ ಆಯವ್ಯಯದಲ್ಲಿ ಜಿಲ್ಲಾ ಪರಿಷತ್‌ನವರು ಅದಕ್ಕೆ ಹಣವನ್ನು ಕಾದಿರಿಸಿರಲಿಲ್ಲ. ಈ ಸಾರಿ ಕನ್‌ಸಾಲಿಡೇಟೆಡ್ ಗ್ರಾಂಟ್‌ನಿಂದಲಾದರೂ ಇಯರ್ ಮಾರ್ಕ್‌ಮಾಡಿ ಕೊಡುತ್ತೇವೆಂದು ಹೇಳಿದ್ದಾರೆ. ಅದು ಬಂದ ನಂತರ ಇದನ್ನು ಅಪ್ರೂವ್ ಮಾಡಿಕೊಡುತ್ತೇವೆ.

ಅಧ್ಯಕ್ಷರು ; ಇದರ ಜೊತೆ ಇದೇ ರೀತಿಯ ಪ್ರಶ್ನೆ ಮಾನ್ಯ ದೇಶಪಾಂಡೆಯವರದ್ದೂ ಇದೆ. ಅವರೂ ತಮ್ಮ ಜೊತೆಯಲ್ಲಿಯೇ ಪ್ರಶ್ನೆಯನ್ನು ಕೇಳಲಿ.